ಇಮ್ಮಡಿ ಕೃಷ್ಣರಾಜ ಒಡೆಯರ್ ಪತ್ನಿ ಲಕ್ಷ್ಮೀ ಅಮ್ಮಣ್ಣಿ ಅವರ ತಲೆಯ ಮೇಲೆ ಬಿತ್ತು. ತಿರುಚನಾಪಳ್ಳಿಯ ಖಿಲ್ಲೇದಾರ ಕತ್ತಿ ಗೋಪಾಲಯ್ಯ ಅವರ ಮಗಳಾದ ಲಕ್ಷ್ಮಮ್ಮಣ್ಣಿ, 1760ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಮದುವೆಯಾಗಿ ಮೈಸೂರಿಗೆ ಬಂದವರು. ಕ್ಷತ್ರಿಯ ಗುಣಗಳನ್ನು ಹೊಂದಿದ್ದ ಅವರು ರಾಜ್ಯವನ್ನು ದಳವಾಯಿಗಳ ಪಾಲಿಗೆ ಅಥವಾ ಹೈದರಾಲಿ–ಟಿಪ್ಪು ಸುಲ್ತಾನ್ ಅವರ ಪಾಲಿಗೆ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ರಾಜ್ಯದ ಸಿಂಹಾಸನದ ಮೇಲೆ ಹಿಡಿತ ಸಾಧಿಸಲು ಪ್ರಯತ್ನ ನಡೆಸುತ್ತಿದ್ದವರ ತಂತ್ರ ಕುತಂತ್ರದ ಪರಿಚಯ ಅವರಿಗಿತ್ತು. ಮೈಸೂರು ಅರಸು ವಂಶದ ಉಳಿವಿಗೆ ಅವರು ನಿರಂತರ ಹೋರಾಟ ನಡೆಸಿದರು. ಅಪಾರ ಪರಿಶ್ರಮ, ರಾಜಕೀಯ ತಂತ್ರಗಳ ಮೂಲಕ ಅವರು ಮೈಸೂರು ಸಂಸ್ಥಾನ ಮತ್ತೆ ಯದುವಂಶದ ಕುಡಿಗಳಿಗೇ ಲಭ್ಯವಾಗುವಂತೆ ಮಾಡಿದರು. ಮೈಸೂರು ಮಹಾರಾಜರ ಇತಿಹಾಸದಲ್ಲಿ ಇದೊಂದು ಅವಿಸ್ಮರಣೀಯ ಹೋರಾಟ.

ಇಮ್ಮಡಿ ಕೃಷ್ಣರಾಜ ಒಡೆಯರ್ ನಿಧನರಾದ ತಕ್ಷಣವೇ ತಮ್ಮ ಇಬ್ಬರು ಮಕ್ಕಳ ಪೈಕಿ ಮೊದಲನೆಯವನಿಗೆ ಪಟ್ಟಕಟ್ಟಲು ಅವರು ನಿರ್ಧರಿಸಿದರು. ಪತಿ ನಿಧನರಾದಾಗ ಲಕ್ಷ್ಮಮ್ಮಣ್ಣಿ ಅವರಿಗೆ ಕೇವಲ 25 ವರ್ಷ ವಯಸ್ಸು. ಪತಿಯೊಂದಿಗೆ ಅವರು ಕಾಲ ಕಳೆದಿದ್ದು ಕೇವಲ 6 ವರ್ಷ. ಆನಂತರ ಅವರಿಗೆ ರಾಜಮಾತೆಯ ಪಟ್ಟ. ಅದನ್ನವರು ಸಮರ್ಥವಾಗಿ ನಿರ್ವಹಿಸಿದರು. ಆದರೂ, ತಮ್ಮ ಮೊದಲ ಮಗನಿಗೆ ಪಟ್ಟ ಕಟ್ಟುವ ರಾಜಮಾತೆಯ ಪ್ರಯತ್ನ ಫಲಿಸುವುದಿಲ್ಲ. ಆಗ ಪ್ರಬಲನಾಗಿದ್ದ ಹೈದರಾಲಿ, ಲಕ್ಷ್ಮಮ್ಮಣ್ಣಿಯವರ ಎರಡನೇ ಮಗ ನಂಜರಾಜ ಒಡೆಯರ್‌ಗೆ ಪಟ್ಟ ಕಟ್ಟುತ್ತಾನೆ.

ನಂಜರಾಜ ಒಡೆಯರ್ ಪಟ್ಟಕ್ಕೇರಿದ್ದು 1766ರಲ್ಲಿ. ಅವರು 1770ರಲ್ಲಿ ನಿಧನರಾದರು. ನಂತರ ಬೆಟ್ಟದ ಚಾಮರಾಜ ಒಡೆಯರ್ ಅವರನ್ನು ಪಟ್ಟಕ್ಕೆ ಏರಿಸಿದರು ಲಕ್ಷ್ಮಮ್ಮಣ್ಣಿ. ಬೆಟ್ಟದ ಚಾಮರಾಜ ಒಡೆಯರ್ ಅವರು ಪಟ್ಟಕ್ಕೆ ಬಂದಿದ್ದು 1770ರಲ್ಲಿ. 1776ರಲ್ಲಿ ಅವರು ನಿಧನರಾದರು. ಆಗ ಖಾಸಾ ಚಾಮರಾಜ ಒಡೆಯರ್ ಅವರನ್ನು ದತ್ತು ಪಡೆದ ರಾಜಮಾತೆ, ಅವರನ್ನು 1776ರಲ್ಲಿ ಪಟ್ಟಕ್ಕೆ ತಂದರು. ಅವರು ಪಟ್ಟಕ್ಕೆ ಬಂದಾಗ ಅವರ ವಯಸ್ಸು ಕೇವಲ 2 ವರ್ಷ. ಅವರು 1796ರಲ್ಲಿ ಸಾವನ್ನಪ್ಪಿದರು. ನಂತರ ಐದು ವರ್ಷದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾರಾಜರಾದರು. 1794ರಲ್ಲಿ ಜನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 1799ರಲ್ಲಿ ಮಹಾರಾಜರಾದರು. ರಾಜಮಾತೆ ಲಕ್ಷ್ಮಮ್ಮಣ್ಣಿ ಅವರ ಬದುಕಿನಲ್ಲಿ ನಾಲ್ಕು ಮಹಾರಾಜರು ಬಂದರು. ದಳವಾಯಿಗಳೊಂದಿಗೆ ಹೈದರಾಲಿ ಹಾಗೂ ಟಿಪ್ಪು ಅವರ ವಿರೋಧ, ಪ್ರತಿರೋಧ ಎಲ್ಲವನ್ನೂ ರಾಜಮಾತೆ ಎದುರಿಸಬೇಕಾಯಿತು.

ಆಗ ಅರಮನೆಯಲ್ಲಿ ಬರೀ ವಂಚನೆ, ದ್ರೋಹ, ಮೋಸ, ಕಪಟ, ಕುಟಿಲತೆಗಳೇ ತಾಂಡವವಾಡುತ್ತಿದ್ದವು. ದಳವಾಯಿ, ಪ್ರಧಾನಿ


ಕೆಂಪನಂಜಮ್ಮಣ್ಣಿ


ಕಂಠೀರವ ನರಸಿಂಹರಾಜ ಒಡೆಯರ್, ಜಯಲಕ್ಷ್ಮಿ ಅಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, (ಕುಳಿತಿರುವವರು) ಚಲುವಾಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರ್